

ಬೆಳವಣಿಗೆಗೆ ಸಂಬಂಧಿಸಿದ ಹಾರ್ಮೋನ್ ಹೆಂಗಸರಿಗೆ ಕೂದಲು ಉದುರದಂತೆ ತಡೆಯುತ್ತದೆ. ಆದರೆ ಗಂಡಸರಿಗೆ ಈ ಭಾಗ್ಯವಿಲ್ಲ. ನಿಜಕ್ಕೂ ಪ್ರಕೃತಿ ಪುರುಷರಿಗೆ ಈ ವಿಷಯದಲ್ಲಿ ಘೋರ ಅನ್ಯಾಯವನ್ನೇ ಮಾಡಿಬಿಟ್ಟಿದೆ.

ಮೊಟ್ಟೆ, ಬಾಂಡ್ಲಿ, ಗುಂಡು, ಬೋಳ, ಟಕ್ಲು, ಮತ್ತು ನಮ್ಮ ಕೊಡಗಿನಲ್ಲಿ ಹೇಳುವ ಹಾಗೆ ಚಾಣೆ ಮಂಡೆ ಇತ್ಯಾದಿ ಉಪ ನಾಮಧೇಯಗಳಿಂದ ಅಲಂಕೃತರಾಗುವ ಕಷ್ಟ ಯಾವ ಶತ್ರುವಿಗೂ ಬೇಡ. ಹೆಣ್ಣು ನೋಡಲು ಹೋದರೆ ಹುಡುಗಿಯರು ಅಷ್ಟು ಬಡಪಟ್ಟಿಗೆ ಒಪ್ಪುವುದಿಲ್ಲ ಅನ್ನುವ ಕಷ್ಟ ಬೇರೆ ಎದುರಿಸಬೇಕು. ಹಾಗಾಗಿ ಸೌಂದರ್ಯ ವರ್ಧಕಗಳಲ್ಲಿ ತಲೆಗೂದಲ ಆರೈಕೆ ಮಾಡುವ ಪ್ರಸಾದನಗಳಿಗೇ ಹೆಚ್ಚು ಬೇಡಿಕೆ.

ತಲೆಗೂದಲ ಸಮೃದ್ಧಿ ನಮ್ಮ ನಮ್ಮ ಅನುವಂಶೀಯತೆ, ಸೇವಿಸುವ ಆಹಾರ, ವಾಸಿಸುವ ಪರಿಸರದ ಮಾಲಿನ್ಯ, ಮನಸ್ಸಿನ ನೆಮ್ಮದಿ, ಹೀಗೆ ಎಷ್ಟೊಂದು ಅಂಶಗಳ ಮೇಲೆ ಅವಲಂಬಿತವಾಗಿದೆ. ಆದರೂ ತಮ್ಮ ಕೇಶರಾಶಿಯ ಸೌಂದರ್ಯ ವೃದ್ಧಿಸಲು, ನೈಸರ್ಗಿಕವಾಗಿ ದೊರೆಯುವ ಉತ್ಪನ್ನಗಳ ಬಳಸಿ ತಲೆಗೂದಲ ಹೊರೆ ಹೆಚ್ಚಿಸಿಕೊಳ್ಳುವವರು ಕೆಲವರಾದರೆ, ಚರ್ಮ ವೈದ್ಯರ ಮೊರೆ ಹೋಗುವವರು ಹಲವರು.

ಎಂತೆಂಥ ಉಪಾಯ ಮಾಡಿದರೂ ಮೊಳೆಯದ ಬರಡು ತಲೆಯವರು ಕೃತಕ ವಿಗ್‌ಗಳ ಮೊರೆ ಹೋಗುತ್ತಾರೆ. ನಿಜಕ್ಕೂ ಈ ವಿಗ್‌ಗಳು ಆಪ್ತರಕ್ಷಕ ಕವಚಗಳೇ ಸರಿ. ಊಹಿಸಲೂ ಸಾಧ್ಯವಿಲ್ಲದಂತೆ ಮುಖಲಕ್ಷಣವನ್ನು ಬದಲಾಯಿಸಿಬಿಡುತ್ತವೆ. ಇದಕ್ಕೆ ನಾನು ಕಣ್ಣಾರೆ ಕಂಡಿರುವ ಒಂದು ನಿದರ್ಶನವೇ ಇದೆ. ಹೀಗೆ ಒಂದು ತರಬೇತಿಯಲ್ಲಿ ಕುಳಿತಿರುವಾಗ, ಉದ್ಘಾಟನಾ ಸಮಾರಂಭದಲ್ಲಿ, ವೇದಿಕೆಯಲ್ಲಿ ಕುಳಿತಿದ್ದ ಓರ್ವ ಅಧಿಕಾರಿಯ ಮುಖ ಪರಿಚಿತವಾದದ್ದು ಅನಿಸಿದರೂ, ಎಷ್ಟು ತಲೆ ಕೆರೆದುಕೊಂಡರೂ ಅವರ ಹೆಸರು ಹೊಳೆಯದೆ ಹೋಯಿತು. ಪಕ್ಕದಲ್ಲೇ ಕುಳಿತಿದ್ದ ನನ್ನ ಓರ್ವ ಸಹೋದ್ಯೋಗಿಯನ್ನು 'ಮೇಡಂ, ಇವರ್ಯಾರು, ನಮ್ಮ ಜಿಲ್ಲೆಗೆ ಹೊಸದಾಗಿ ಬಂದಿದ್ದಾರೆಯೇ?' ಎಂದಿದ್ದಕ್ಕೆ, ಆಕೆ ಪಿಸುಮಾತಿನಲ್ಲಿ, 'ಅಯ್ಯೋ, ಹಳಬರೇ ಕಣ್ರೀ. ಹೊಸದಾಗಿ ವಿಗ್ ಬಳಸುತ್ತಿದ್ದಾರೆ, ಅಷ್ಟೂ ಗೊತ್ತಾಗಿಲ್ಲ ನಿಮಗೆ' ಎಂದು ಅವರ ಹೆಸರು ಹೇಳಿದಾಗ, ನನಗೆ ಅಚ್ಚರಿಯೋ ಅಚ್ಚರಿ.

ಈ ವಿಗ್‌ಧಾರಿಗಳಿಗಿಂತಲೂ ಧೈರ್ಯಶಾಲಿಗಳು ತಲೆಯನ್ನು ನುಣ್ಣಗೆ ಬೋಳಿಸಿ, ಮಿರ ಮಿರ ಮಿಂಚುವ ತಲೆಯೆತ್ತಿ ಆತ್ಮವಿಶ್ವಾಸದಿಂದ ಪ್ರಪಂಚ ಎದುರಿಸುತ್ತಾರೆ. ನಮ್ಮ ಅನುಪಮ್ ಖೇರ್, ಇಂದ್ರಜಿತ್ ಲಂಕೇಶ್, ವಸುಧೇಂದ್ರ ಅವರ ತರಹ. ಸ್ವಲ್ಪ ದುಡ್ಡು ಹೆಚ್ಚಾಗಿರುವ ಜನ ಆಧುನಿಕ ವೈದ್ಯ ವಿಜ್ಞಾನದ ಮೊರೆ ಹೋಗುತ್ತಾರೆ. ಆಧುನಿಕ ವೈದ್ಯರು ಎಷ್ಟು ಮುಂದುವರೆದಿದ್ದಾರೆ ಎಂದರೆ, ಬರಡು ತಲೆಯಲ್ಲೂ ಕೂದಲ ನಾಟಿ ಮಾಡಿ ಉತ್ತಮ ಬೆಳೆ ತೆಗೆಯುವ ಕೌಶಲ್ಯ ಸಿದ್ಧಿ ಮಾಡಿಕೊಂಡುಬಿಟ್ಟಿದ್ದಾರೆ. ಆದರೆ ಕೂದಲ ಬೆಳೆ ತೆಗೆಯಲು ಹಣದ ಥೈಲಿ ಕೂಡ ದೊಡ್ಡದಿರಬೇಕು. ನಮ್ಮಂಥ ಮಧ್ಯಮ ವರ್ಗದವರ ಕೈಗೆ ಎಟಕುವ ಸೌಲಭ್ಯ ಖಂಡಿತ ಅಲ್ಲ.

ಗಂಡಸರಂತೆ ತಲೆಗೂದಲು ಪೂರ್ತಿ ಉದುರಿ ಹೋಗುವ ಸಮಸ್ಯೆ ಹೆಂಗಸರಲ್ಲಿ ಬಹಳ ಕಡಿಮೆ. ಎಲ್ಲೋ ಹತ್ತು ಲಕ್ಷದಲ್ಲಿ ಒಬ್ಬರಿಗೆ ಆ ರೀತಿ ಆಗಬಹುದೇನೋ. ಆದರೆ ಕೂದಲು ಉದುರುವ ಸಮಸ್ಯೆಯಂತೂ ಲಿಂಗಭೇದವಿಲ್ಲದೆ ಇಬ್ಬರನ್ನೂ ಕಾಡುತ್ತದೆ.

ಹೆಣ್ಣುಮಕ್ಕಳ ತಲೆಗೂದಲ ಆರೈಕೆ ಅಮ್ಮಂದಿರು ಚಿಕ್ಕಂದಿನಿಂದಲೇ ಶುರು ಮಾಡಿ ಬಿಡುತ್ತಾರೆ. ತಲೆಗೆ ಹಚ್ಚುವ ಎಣ್ಣೆಗಳೇನು, ಸೀಗೆಪುಡಿ ಚಿಜ್ಜಲು ಪುಡಿ ಹಾಕಿ ಉಜ್ಜಿ ತಲೆ ತೊಳೆದು ಕೊಡುವುದೇನು, ತಲೆಗೆ ಹಾಕುವ ಮೆಹಂದಿ ಪ್ಯಾಕ್‌ಗಳೇನು, ಏನೇನು ಸಾಧ್ಯವೋ ಅದೆಲ್ಲವನ್ನೂ ಹೆಣ್ಣುಮಕ್ಕಳ ತಲೆ ಮೇಲೆ ಪ್ರಯೋಗ ಮಾಡುವುದೇ ಸೈ. ಆದರೆ ಹುಡುಗಿಯರು ದೊಡ್ಡವರಾಗುತ್ತಿದ್ದಂತೆ ಶಾಂಪೂಗೆ ನೆಗೆದುಬಿಡುತ್ತಾರೆ.

ನಮ್ಮಮ್ಮ ಮತ್ತವರ ತಂಗಿಯರೆಲ್ಲ ಚಿಕ್ಕಂದಿನಲ್ಲಿ ಚೆನ್ನಾಗಿ ಕೇಶವರ್ಧಿನಿ ತೈಲ ಹಾಕಿ ಹಾಕಿ ಮಂಡಿಯುದ್ದ ಜಡೆ ಬೆಳೆಸಿಕೊಂಡವರು. ನನಗೂ ಚಿಕ್ಕಂದಿನಲ್ಲಿ ಅಮ್ಮ ಚೆನ್ನಾಗಿ ಕೇಶವರ್ಧಿನಿ ಪ್ರಯೋಗ ಮಾಡಿ ಪಿಯುಸಿ ತಲುಪುವಷ್ಟರಲ್ಲಿ ತಲೆಕೂದಲು ಹೊರೆಯಾಗಿ ಬೆಳೆದುಬಿದ್ದಿತ್ತು. ಆದರೆ ಕಾಲೇಜ್ ಸೇರಿದ ಮೇಲೆ ನನ್ನ ಗೆಳತಿಯರ ಹಾಗೆ ಚಿಕ್ಕದಾದ ಹೇರ್ ಸ್ಟೈಲ್ ಮಾಡಿಕೊಳ್ಳುವ ಆಸೆಯಾಗಿ ಕತ್ತರಿಸಿಕೊಂಡು ಬಿಟ್ಟೆ. ಈಗ ಎಷ್ಟು ವರ್ಷ ಬಿಟ್ಟರೂ ಬೆಳೆಯದ ನನ್ನ ಮೊಂಡು ಕೂದಲ ನೋಡಿ, 'ಛೇ, ಯಾಕಾದರೂ ಕತ್ತರಿಸಿಕೊಂಡೆನೋ' ಎಂದು ಹಲುಬುವಂತಾಗುತ್ತದೆ.

ನನ್ನ ಸಹೋದ್ಯೋಗಿಯೊಬ್ಬರಿಗೆ ತಲೆಗೂದಲು ಸ್ವಲ್ಪ ತೆಳುವಾಗಿ ಇದ್ದದ್ದಕ್ಕೆ ಚಿಕ್ಕಂದಿನಲ್ಲಿ ಅವರಿಗೆ ಕೊರಗು ಅಂದ್ರೆ ಕೊರಗಂತೆ. ಆಗ ಅವರಜ್ಜಿ ಅವರನ್ನು ಸಮಾಧಾನ ಮಾಡಲು ಒಂದು ಕಥೆ ಹೇಳೋರಂತೆ. ಆ ಕಥೆ ಪ್ರಕಾರ, 'ಹೆಣ್ಣುಮಕ್ಕಳು ಹುಟ್ಟುವ ಮುಂಚೆ ಬ್ರಹ್ಮ ತನ್ನ ಬಳಿ ಕರೆಸಿಕೊಂಡು – ಮಗಳೇ, ನಿನಗೆ ಮಂಡೆ ಸುಖ ಬೇಕೋ, ಗಂಡನ ಸುಖ ಬೇಕೋ ಎಂದು ಕೇಳುತ್ತಾನಂತೆ. ಹಂಗಾಗಿ ಉದ್ದನೆಯ